# ಇಟಾಲಿಯನ್ ಕನೆಕ್ಷನ್

ಯುರೋಪ್! ಶಬ್ದ ಕೇಳಿದಾಕ್ಷಣವೇ ನಿಮ್ಮ ಹೃದಯ ಹುಚ್ಚೆದ್ದು ಕುಣಿಯುತ್ತದೆ, ನಿಮ್ಮ ಮನಸ್ಸಿನಾಳಕ್ಕೆ ಆನಂದದ ಅಲೆಯೇಳುತ್ತದೆ. ಎಲ್ಲರಿಗೂ ಈ ಸುಂದರ ದೇಶವನ್ನು ಜೀವನದಲ್ಲಿ ಒಮ್ಮೆಯಾದರೂ ಭೇಟಿಮಾಡಬೇಕೆಂಬ ಅಪೇಕ್ಷೆಯಿರುತ್ತದೆ. ಕೆಲವರು ಯುರೋಪ್‌ಗೆ ಭೇಟಿಕೊಡುವ ತಮ್ಮ ಜೀವಮಾನದ ಕನಸನ್ನು ನನಸಾಗಿಸಿಕೊಳ್ಳಲು ಬಯಸುತ್ತಾರೆ, ಕೆಲವರು ಕೆಲಸಗಳಿಗಾಗಿ ಯುರೋಪ್‌ಗೆ ಭೇಟಿಕೊಡುತ್ತಾರಾದರೂ ಈಗ ತಮ್ಮ ಜೊತೆಗಾರರನ್ನೂ ಯುರೋಪ್‌ಗೆ ಕರೆದೊಯ್ಯಲು ಬಯಸುತ್ತಾರೆ, ಕೆಲವು ಹೆತ್ತವರು ಪರೀಕ್ಷೆಗಳ ಮುನ್ನ ಭರವಸೆ ನೀಡಿದಂತೆ ತಮ್ಮ ಮಕ್ಕಳನ್ನು ಯುರೋಪ್‌ಗೆ ಕೊಂಡೊಯ್ಯಲು ಬಯಸುತ್ತಾರೆ, ಕೆಲವು ವಿದೇಶಗಳಲ್ಲಿ ಸೆಟ್ಲ್ ಆಗಿರುವ ಮಕ್ಕಳು ತಮ್ಮ ಹೆತ್ತವರನ್ನು ಯುರೋಪ್ ಪ್ರವಾಸಕ್ಕೆ ಕಳುಹಿಸುತ್ತಾರೆ, ಹನಿಮೂನ್ ಸಂಭ್ರಮ ಪಡೆಯುವವರಿಗಂತೂ ಸ್ವಿಟ್ಜರ್‌ಲ್ಯಾಂಡ್ ಯಾವಾಗಲೂ ಮೊದಲ ಆಯ್ಕೆಯೆನಿಸಿದೆ. ಕೆಲವರು ಹೆಂಡತಿ ಅಥವಾ ಗಂಡನಿಗೆ ಆಸಕ್ತಿ ಇಲ್ಲದಿದ್ದರೆ ಸ್ವತಃ ಒಬ್ಬರೇ ಯುರೋಪ್ ಪ್ರವಾಸಕ್ಕೆ ತೆರಳುತ್ತಾರೆ. ಎರಡನೇ, ಮೂರನೇ ಅಥವಾ ನಾಲ್ಕನೇ ಸಲ ಯುರೋಪ್‌ಗೆ ಭೇಟಿ ಕೊಡುವವರ ಸಂಖ್ಯೆ ಕೂಡ ದಿನದಿನಕ್ಕೂ ಹೆಚ್ಚುತ್ತಿದೆ. ಇಂಥ ಹಲವಾರು ಪ್ರವಾಸಿಗರಿಗೆ ಇಟಲಿ ಎಂಬುದು ಅಚ್ಚುಮೆಚ್ಚಿನ ತಾಣವಾಗಿದೆ.

ಯುರೋಪ್‌ನ ಗಮನಾರ್ಹ ತಾಣಗಳ ಪೈಕಿ ಒಂದಾಗಿರುವ ಇಟಲಿಯು ಇತಿಹಾಸ, ಕಲೆ, ಅಡುಗೆ, ಆರ್ಕಿಟೆಕ್ಚರ್, ವೈಜ್ಞಾನಿಕ ಸಂಶೋಧನೆ ಇತ್ಯಾದಿ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದೆ. ಹಲವಾರು ವಿಭಿನ್ನ ವ್ಯಕ್ತಿತ್ವಗಳಾದ ಮೈಕೆಲ್ ಆಂಜೆಲೋ, ಲಿಯೋನಾರ್ಡ ಡಾ ವಿಂಚಿ, ಡಾಂಟೆ, ಸೋಫಿಯಾ ಲಾರೆನ್ಸ್, ಮಾರ್ಕೊ ಪೋಲೊ, ಅಮೆರಿಗೊ ವೆಸ್‌ಪುಸಿ ಮತ್ತು ವಿವಾಲ್ಡಿ ಇಟಲಿಯಲ್ಲಿ ಪ್ರಸಿದ್ಧಿಯ ಉತ್ತುಂಗಕ್ಕೇರಿದವರು. ರೋಮನ್ ಸಾಮ್ರಾಜ್ಯದಿಂದ ಪ್ರಾರಂಭಿಸಿ ಕಲೆಯ ರೀನಾಯ್ಸೆನ್ಸ್ ವರೆಗೆ ಈ ದೇಶವು ಹಲವಾರು ಮಹತ್ವದ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ನಕ್ಷೆಯ ಮೇಲೆ ಒಮ್ಮೆಗೆ ನೀವು ದೃಷ್ಟಿ ಹಾಯಿಸಿದರೆ ಈ ದಕ್ಷಿಣ ಯುರೋಪ್‌ನ ದೇಶವು ಒಂದು ಶೂನ ಆಕಾರದಲ್ಲಿರುವುದನ್ನು ನೀವು ಕಾಣುತ್ತೀರಿ. ಈ ದೇಶದ ದಕ್ಷಿಣ ಭಾಗದಲ್ಲಿ 7600 ಕಿಮೀ ಉದ್ದದ ತೀರಪ್ರದೇಶವಿದ್ದು ಉತ್ತರದಲ್ಲಿ ಹಿಮಾಚ್ಛಾದಿತ ಆಲ್ಪ್‌ಗಳು ಎಂದು ಕರೆಯುವ ಪರ್ವತಗಳು ಇದರ ಗಡಿ ಎನಿಸಿವೆ. ಇಟಲಿಗೆ ಬೆಲ್ ಪಯಿಸೇ ಎಂಬ ನಿಕ್‌ನೇಮ್ ಇದ್ದು ಇದರ ಅರ್ಥ ಸುಂದರ ದೇಶ ಎಂಬುದಾಗಿದೆ. ಇಟಲಿಯ ಗಮನಾರ್ಹ ಲಕ್ಷಣಗಳ ಪೈಕಿ ಒಂದು ಎಂದರೆ ಈ ದೇಶದ ಒಳಗೆ ಸ್ವತಂತ್ರವಾದ ದೇಶವೊಂದಿದೆ, ಅದರ ಹೆಸರೇ ವ್ಯಾಟಿಕನ್ ಸಿಟಿ. ವ್ಯಾಟಿಕನ್ ಸಿಟಿಯು ಸಾರ್ವಭೌಮ ನಗರ ದೇಶವಾಗಿದ್ದು ರೋಮ್ ನಗರದ ಒಳಭಾಗದಲ್ಲೇ ಗೋಡೆಗಳ ಆವರಣದೊಳಗಿನ ಸ್ಥಳದಲ್ಲಿದೆ. ವ್ಯಾಟಿಕನ್ ಸಿಟಿಗೆ ಅದರದ್ದೇ ಆದ ಅಂಚೆ ಕಚೇರಿ, ಪೊಲೀಸ್ ದಳ, ಬ್ಯಾಂಕ್, ವಿದ್ಯುತ್ ವ್ಯವಸ್ಥೆ, ರೇಡಿಯೋ ಸ್ಟೇಷನ್ ಹಾಗೂ ಕರೆನ್ಸಿ ಕೂಡ ಇದೆ.

ಇಟಲಿಗೆ ಭೇಟಿ ನೀಡುವ ಪ್ರವಾಸಿಗರ ಮಟ್ಟಿಗೆ ಪ್ರಮುಖವಾದ ಆಕರ್ಷಣೆ ಎಂದರೆ ಅಲ್ಲಿನ ಕಲಾತ್ಮಕ ಕಟ್ಟಡಗಳು, ಶಿಲ್ಪಗಳು, ಆರ್ಕಿಟೆಕ್ಚರ್ ಮತ್ತು ಪೇಂಟಿಂಗ್‌ಗಳು. ರೋಮ್‌ನಲ್ಲಿರುವ ಟ್ರೆವಿ ಫೌಂಟನ್ ಅಥವಾ ಫ್ಲೋರೆನ್ಸ್‌ನಲ್ಲಿರುವ ಡೇವಿಡ್‌ನ ಪ್ರತಿಮೆ, ಮಿಲಾನ್‌ನಲ್ಲಿರುವ 'ಲಾಸ್ಟ್ ಸಪರ್' ಎಂಬ ಪೇಂಟಿಂಗ್ ಅಥವಾ ಪೀಸಾದ ವಾಲುವ ಗೋಪುರ; ಈ ಎಲ್ಲ ಕಲಾತ್ಮಕ ರೂಪಗಳೂ ಮನುಷ್ಯರ ಅಚ್ಚರಿಯ ಸೌಂದರ್ಯಪ್ರಜ್ಞೆ, ಕಲಾತ್ಮಕತೆ ಹಾಗೂ ಕುಸುರಿಗೆ ಸಾಕ್ಷಿಯಾಗಿವೆ. ಈ ಕಾರಣಕ್ಕಾಗಿಯೇ ಅತೀ ಹೆಚ್ಚು ಯುನೆಸ್ಕೋ ಪಟ್ಟಿಮಾಡಿರುವ ವಿಶ್ವಪರಂಪರೆಯ ತಾಣಗಳು ಇಟಲಿಯಲ್ಲಿವೆ. ಇಟಲಿಯಲ್ಲಿ 3000ಕ್ಕೂ ಹೆಚ್ಚಿನ ಮ್ಯೂಸಿಯಂಗಳಿವೆ. ಇಟಲಿಯ ಶ್ರೀಮಂತ ಕಲಾ ಸಂಪ್ರದಾಯಗಳಲ್ಲಿ ಒಂದು ಗಮನಾರ್ಹ ಹೆಸರು ಎಂದರೆ ಲಿಯೋನಾರ್ಡೋ ಡಾ ವಿಂಚಿ. ಆತ ಒಬ್ಬ ಪೇಂಟರ್, ಶಿಲ್ಪಿ, ಆರ್ಕಿಟೆಕ್ಟ್, ಎಂಜಿನಿಯರ್ ಮಾತ್ರವೇ ಅಲ್ಲ, ಸಂಗೀತಗಾರ, ಗಣಿತಜ್ಞ, ವಿಜ್ಞಾನಿ, ಭೂಗರ್ಭಶಾಸ್ತ್ರಜ್ಞ, ಸಸ್ಯಶಾಸ್ತ್ರಜ್ಞ ಮತ್ತು ಬರಹಗಾರ ಕೂಡ ಆಗಿದ್ದ. ಮೋನಾ ಲೀಸಾ ಮತ್ತು ಲಾಸ್ಟ್ ಸಪರ್‌ಗಳಂಥ ಮಾಸ್ಟರ್ ಪೀಸ್‌ಗಳನ್ನು ರಚಿಸಿದ್ದ ಈತ ಹೆಲಿಕಾಪ್ಟರ್, ಟ್ಯಾಂಕ್, ಸೌರಶಕ್ತಿಯ ಬಳಕೆ ಮತ್ತು ಕ್ಯಾಲ್ಕ್ಯುಲೇಟರ್ ಬಗ್ಗೆ ಯೋಜನೆಗಳನ್ನು ರೂಪಿಸಿದ್ದ. ಇಟಲಿಯು ಡಾ ವಿಂಚಿಯ ಸಂಶೋಧನಾ ಪರಂಪರೆಯನ್ನು ಕಾಪಾಡಿಕೊಂಡು ಬಂದಿತು ಎಂದರೆ ತಪ್ಪೇನೂ ಆಗುವುದಿಲ್ಲ. ಏಕೆಂದರೆ ಥರ್ಮೋಮೀಟರ್, ಟೈಪ್‌ರೈಟರ್, ವೆಸ್ಪಾ ಸ್ಕೂಟರ್, ಎಸ್‌ಪ್ರೆಸೊ ಕಾಫಿ ಮಷೀನ್ ಮತ್ತು ವಯೋಲಿನ್‌ಗಳೆಲ್ಲ ಇಟಲಿಯಲ್ಲೇ ಸಂಶೋಧನೆಗೊಂಡವು.

ಸಾಮಾನ್ಯವಾಗಿ ಇಟಲಿ ಎಂದಾಕ್ಷಣ ನಮಗೆ ಪಿಜ್ಜಾ ನೆನಪಾಗುತ್ತದಾದರೂ ಇಟಾಲಿಯನ್ ಅಡುಗೆಯಲ್ಲಿ ರಾಷ್ಟ್ರೀಯ ಆಹಾರದ ಸ್ಥಾನಮಾನ ಪಡೆದಿರುವುದು ಎಂದರೆ ಪಾಸ್ತಾ. ಸಮೀಕ್ಷೆಯೊಂದರ ಪ್ರಕಾರ ಒಬ್ಬ ಸಾಮಾನ್ಯ ಇಟಾಲಿಯನ್ ವ್ಯಕ್ತಿ ವರ್ಷಕ್ಕೆ 25 ಕಿಗ್ರಾಂಗಳನ್ನು ಪಾಸ್ತಾ ಸೇವಿಸುತ್ತಾರಂತೆ. ಇಟಾಲಿಯನ್ ಪಾಸ್ತಾದ ಗಮನಾರ್ಹ ಲಕ್ಷಣಗಳು ಎಂದರೆ ವಿವಿಧ ಗಾತ್ರ ಹಾಗೂ ಆಕಾರಗಳ ನೂಡಲ್‌ಗಳನ್ನು ಪಾಸ್ತಾ ತಯಾರಿಕೆಗೆ ಬಳಕೆ ಮಾಡಲಾಗುತ್ತದೆ. ಆಕಾರವನ್ನು ಆಧರಿಸಿ ನೂಡಲ್‌ಗಳನ್ನು ಪೆನ್ನೆ, ಸ್ಪಗೆಟ್ಟಿ, ಮಕರೋನಿ, ಲಿಂಗ್ವೈನ್, ಫುಸಿಲಿ ಮತ್ತು ಲಸಾಗ್ನಾ ಎಂದು ಹೆಸರಿಸಲಾಗುತ್ತದೆ. ಜಗತ್ತಿನಾದ್ಯಂತ ಎಲ್ಲರೂ ಇಂದು ಸವಿಯು ಪಿಜ್ಜಾ ಎಂಬುದು ಇಟಾಲಿಯನ್ ಪಿಜ್ಜಾದ ಅಮೆರಿಕನ್ ಅವತಾರವಾಗಿದೆ. ಪಿಜ್ಜಾವನ್ನು ಮೊಟ್ಟಮೊದಲ ಬಾರಿ ನಾಪೋಲಿ ಅಂದರೆ ನೇಪಲ್ಸ್‌ನಲ್ಲಿ ತಯಾರಿಸಲಾಯಿತು. ಇಟಾಲಿಯನ್ ಅಡುಗೆಯ ಮಹತ್ವದ ಭಾಗವೆಂದರೆ ಸ್ವಾದಿಷ್ಟವಾದ ಇಟಾಲಿಯನ್ ವೈನ್. ಇಟಲಿಯು ಜಗತ್ತಿನ ಅತಿದೊಡ್ಡ ವೈನ್ ತಯಾರಕ ದೇಶವೆನಿಸಿದೆ, ಹಾಗೆಯೇ ಜಗತ್ತಿನಲ್ಲೇ ಅತಿಹೆಚ್ಚು ವೈನ್ ಸೇವಿಸುವ ದೇಶವೂ ಆಗಿದೆ. ಈ ದೇಶದಲ್ಲಿ ವ್ಯಕ್ತಿಯೊಬ್ಬ ವರ್ಷಕ್ಕೆ ಸೇವಿಸುವ ವೈನ್ ಪ್ರಮಾಣ 26 ಗ್ಯಾಲನ್ ಎಂದು ಅಂದಾಜಿಸಲಾಗಿದೆ.

ಕಲೆಯ ಆಧುನಿಕ ಜಗತ್ತಿನಿಂದ ಪ್ರಾರಂಭಿಸಿ ಅಡುಗೆಯವರೆಗೆ ಈ ಇಟಾಲಿಯನ್ ಕನೆಕ್ಷನ್ ಎಂಬುದು ನಿಜಕ್ಕೂ ಮುರಿಯಲಾಗದ್ದು. ಸಂಪ್ರದಾಯಗಳಲ್ಲಿ ಶ್ರೀಮಂತವಾಗಿರುವ ಈ ದೇಶದ ವಿವಿಧ ನಗರಗಳನ್ನು ಭೇಟಿಮಾಡುವುದಕ್ಕಾಗಿ ಕೇಸರಿಯು ನಿಮಗೆ ಜೀವಮಾನದ ಅವಕಾಶವನ್ನು ತನ್ನ 'ಫ್ಲೇವರ್ಸ್ ಆಫ್ ಇಟಲಿ' (ಇಎಫ್) ಪ್ರವಾಸದೊಂದಿಗೆ ಒದಗಿಸುತ್ತದೆ. ಈ 9 ದಿನಗಳ ಪ್ರವಾಸವನ್ನು ಮೇ, ಜೂನ್ ಮತ್ತು ಅಕ್ಟೋಬರ್‌ಗಳಲ್ಲಿ ವ್ಯವಸ್ಥೆಮಾಡಲಾಗುತ್ತದೆ. ಈ ಪ್ರವಾಸದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು 1800 22 1100 ಗೆ ಕರೆಮಾಡಿ.





| ಕೋಡ್ | ಪ್ರವಾಸದ ಹೆಸರು | ದಿನಗಳು |
|---|---|---|
| E3 | ಪಾಪ್ಯುಲರ್ ಯುರೋಪ್ | 18 |
| E6 | ಬೆಸ್ಟ್ ಆಫ್ ಯುರೋಪ್ | 14 |
| E7 | ಇಮೇಜಸ್ ಆಫ್ ಯುರೋಪ್ | 12 |
| E8 | ಗ್ಲಿಂಪ್ಸಸ್ ಆಫ್ ಯುರೋಪ್ | 10 |
| P9 | ಪನೋರಮಿಕ್ ಯುರೋಪ್ | 7 |

Bengaluru 4128 2222 • www.kesari.in • SMS KESARI <space>EUROPE to 56677 • Toll free 1800 22 1100